ಆ) ಆಸ್ಪತ್ರೆಯ ಹೆಸರು	ಹಾಲಿಹಾಸಿಗೆಗಳ ಸಂಖ್ಯೆ	ಹೆಚ್ಚಿಸಿದ ಮೇಲೆ ಹಾಸಿಗೆ ಸಂಖ್ಯೆ
ಜಿಲ್ಲೆ ಆಸ್ಪತ್ರೆ, ಬೀದರ್	233	350
ಸಾ.ಆ .ಬೀದರ್	20	30
ಸಾ.ಆ. ಬಸವಕಲ್ಯಾಣ	36	50
ಸಾ.ಆ. ಭಾಲ್ಕಿ	30	100
ಸಾ.ಆ. ಹುಮ್ನಾಬಾದ್	30	50

ಇ) -ಇಲ್ಲ-

ಈ) ಜರ್ಮನ್ ಆರ್ಥಿಕ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದು ಅದು ಒಪ್ಪಂದದ ಹಂತದಲ್ಲಿದೆ. ಇನ್ನೂ ಆರ್ಥಿಕ ನೆರವು ದೊರೆತಿರುವುದಿಲ್ಲ.

ಉ) ಈಗಿನ ಜಿಲ್ಲಾ ಪಂಚಾಯತನಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಬಹುದಾಗಿರುತ್ತದೆ.

ರಾಜ್ಯದಲ್ಲಿ ಶ್ರೀ ಮೊರಾರ್ಜಿ ದೇಸಾಯಿ ಕೇಂದ್ರೀಯ ವಿದ್ಯಾಲಯಗಳು

445 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಪ್ರಾಥಮಿಕ ಹಾಗೂ ಪ್ರಾಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ವರ್ಷದಲ್ಲಿ ರಾಜ್ಯದಲ್ಲಿ ಯಾವ ಜಿಲ್ಲಾ ಕೇಂದ್ರಗಳಲ್ಲಿ ಶ್ರೀ ಮೊರಾರ್ಜಿ ದೇಸಾಯಿಯವರ ಕೇಂದೀಯ ವಿದ್ಯಾಲಯಗಳನ್ನು ಪ್ರಾರಂಭಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು).

ಆ) ಶಾಲೆಗಳನ್ನು ತೆರೆಯುವ ಉದ್ದೇಶವೇನು ಇದರಿಂದ ಗ್ರಾಮೀಣ ಪ್ರದೇಶದ ಬಡಜನತೆಗೆ ಅನುಕೂಲವಾಗುವುದೇ, ಹಾಗಿದ್ದಲ್ಲಿ, ವಿವರ ನೀಡುವುದು.

ಇ) ಬೀದರ್ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಈ ವಿದ್ಯಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ?

ಈ) ಈ ವಿದ್ಯಾಲಯಗಳನ್ನು ಬಸವಕಲ್ಯಾಣದಲ್ಲಿ ಸ್ಥಾಪಿಸಲು ಸರ್ಕಾರದವರು ಕೈಗೊಂಡಿರುವರೆ, ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು ಹಾಗೂ ಯಾವ ಸ್ಥಳದಲ್ಲಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಪ್ರಸ್ತುತ ಇನ್ನೂ ಪ್ರಾರಂಭಿಸಿಲ್ಲ. ಆದರೆ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಶ್ರೀ ಮೊರಾರ್ಜಿದೇಸಾಯಿರವರ ಹೆಸರಿನಲ್ಲಿ ಕೇಂದ್ರೀಯ ವಿದ್ಯಾಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ - 1ರಲ್ಲಿ ಲಗತ್ತಿಸಲಾಗಿದೆ).

ಆ) ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗಾಗಿ ಇದರಿಂದ ಅನುಕೂಲವಾಗಲೆಂದು ಉತ್ತರ ಸೌಲಭ್ಯಗಳನ್ನು ಒದಗಿಸಿ, ವಸತಿ ಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ. (ವಿವರಗಳನ್ನು ಲಗತ್ತಿಸಿದೆ, ಅನುಬಂಧ - 2)

ಇ) ಬೀದರ್ ಜಿಲ್ಲೆಯಲ್ಲಿ ಸೂಕ್ತ ಸ್ಥಳದಲ್ಲಿ ಈ ವಿದ್ಯಾಲಯವನ್ನು ತೆರೆಯಲು ಪರಿಶೀಲಿಸಲಾಗುತ್ತಿದೆ.

ಉ) ಉತ್ತರ ಮೇಲಿನಂತೆ.

ಅನುಬಂಧ - 1

ಶ್ರೀ ಮೊರಾರ್ಜಿ ದೇಸಾಯಿ ಕೇಂದ್ರೀಯ ವಿದ್ಯಾಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಜಿಲ್ಲಾವಾರು ವಿವರ.

1) ಏನಿಗದಲೆ, ಚಿಂತಾಮಣಿ ತಾಲ್ಲೂಕು, ಕೋಲಾರ ಜಿಲ್ಲೆ (ಈ ಕ್ಯಾಂಪಿನಲ್ಲಿ ನವೋದಯ ಶಾಲೆ ಸ್ಥಾಪಿಸಲಾಗಿದೆ)

2) ಕಥಕಾಲ ವಿದ್ಯಾಪೀಠ, ಚಿತ್ರದುರ್ಗ ತಾಲ್ಲೂಕು

3) ತುಂಗಾಪೀಠ, ಶಿವಮೊಗ್ಗ ತಾಲ್ಲೂಕು.

4) ಪಂಪ ವಿದ್ಯಾಪೀಠ, ಹೊಸಕೋಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ

5) ಬಂತರಾಳ ವಿದ್ಯಾಪೀಠ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ

6) ಬಸವಕಲ್ಯಾಣ ವಿದ್ಯಾಪೀಠ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ

7) ಯಗಚಿ ವಿದ್ಯಾಪೀಠ, ಹಾಸನ ತಾಲ್ಲೂಕು

8) ಶಿವಾರಗುಚ್ಚ ವಿದ್ಯಾಪೀಠ,ಮದ್ದೂರು ತಾಲ್ಲೂಕು (ಮಂಡ್ಯ ಜಿಲ್ಲೆ ನವೋದಯ ಶಾಲೆ ನಡೆಯುತ್ತಿದೆ)

9) ಕಾವೇರಿ ವಿದ್ಯಾಪೀಠ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ

10) ಕೆಂಗೇರಿ ವಿದ್ಯಾಪೀಠ,ಬೆಂಗಳೂರು ಜಿಲ್ಲೆ

11) ನಂಜನಗೂಡು ವಿದ್ಯಾಪೀಠ, ನಂಜನಗೂಡು, ಮೈಸೂರು ಜಿಲ್ಲೆ

12) ನವಿಲಗೇರಿ ವಿದ್ಯಾಪೀಠ, ಸಿರ್ಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ

13) ನೆಗಲೂರು ವಿದ್ಯಾಪೀಠ, ಹಾವೇರಿ ತಾಲ್ಲೂಕು, ಧಾರವಾಡ ಜಿಲ್ಲೆ

14) ಶಿವಗಂಗಾ ವಿದ್ಯಾಪೀಠ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ

15) ಹೊಯ್ಸಳ ವಿದ್ಯಾಪೀಠ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

16) ಚಾರ ವಿದ್ಯಾಪೀಠ, ಕಾರ್ಕಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ಉಳಿದ 4 ಜಿಲ್ಲೆಗಳು ಅಂದರೆ ಕೊಡಗು, ಬೆಳಗಾಂ ಬೆಂಗಳೂರು ಗ್ರಾಮಾಂತರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಆಯ್ದ ತಾಲ್ಲೂಕುಗಳಲ್ಲಿ ಈ ಸನಿವಾಸ ಶಾಲೆಗಳನ್ನು ತೆರೆಯಲಾಗುವುದು.

ಅನುಬಂಧ - 2

ಆಯ್ಕೆಯ ಮಾನದಂಡ

ಅ) ಮಂಜೂರಾದ ಎಲ್ಲಾ ಸೀಟುಗಳೂ ಜಿಲ್ಲೆಯ ಅರ್ಹ ಮಕ್ಕಳಿಗೆ ಮೀಸಲಾಗಿರುತ್ತವೆ.

ಆ) ಕನಿಷ್ಠ ಪ್ರತಿ ಶತ 50 ಸೀಟುಗಳನ್ನು ಹೆಣ್ಣು ಮಕ್ಕಳಿಗೆ ನಿಗಧಿಪಡಿಸಲಾಗುತ್ತಿದೆ.

ಇ) ಕನಿಷ್ಠ ಪ್ರತಿ ಶತ 20 ಸೀಟುಗಳನ್ನು ಪರಿಶಿಷ್ಟ ಜಾತಿಯ ಮಕ್ಕಳಿಗೆ ಹಾಗೂ ಪ್ರತಿ ಶತ 5 ಸೀಟುಗಳನ್ನು ಪರಿಶಿಷ್ಟ ವರ್ಗದ ಮಕ್ಕಳಿಗೆ ನಿಗಧಿಪಡಿಸಲಾಗುತ್ತದೆ.

ಈ) ಮಂಜೂರಾದ ಸೀಟುಗಳಲ್ಲಿ ಪ್ರತಿ ಶತ 80 ಸೀಟುಗಳಿಗೆ ಕಡಿಮೆ ಇಲ್ಲದಂತೆ ಸೀಟುಗಳನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ನಿಗಧಿಪಡಿಸಲಾಗುತ್ತದೆ.

ಉ) ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಕಂಡ ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿ ಮಾಡುತ್ತದೆ.

(1) ಮುಖ್ಯಕಾರ್ಯನಿರ್ವಾಹಕ ಅಧಿಕಾರಿ-ಅಧ್ಯಕ್ಷರು

(2) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ-ಸದಸ್ಯರು

(3) ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದ ಜಿಲ್ಲಾ ಅಧಿಕಾರಿ-ಸದಸ್ಯರು

(4) ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು-ಸದಸ್ಯ ಕಾರ್ಯದರ್ಶಿ

ಎಸ್.ಸಿ/ಎಸ್.ಟಿ. ಪಂಗಡಗಳ ಶಾಲೆ ಕಾಲೇಜುಗಳಿಗೆ ಅನುದಾನ.

446 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಾಶ್ವತ ಅನುದಾನ ರಹಿತ ಶಾಲಾ-ಕಾಲೇಜುಗಳನ್ನು ಅನುದಾದಕ್ಕೊಳಪಡಿಸುವ ವಿಷಯ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?